# ಇಂದ್ರಿಯ ನಿಗ್ರಹ



ಸುಮೇರು ಎಂಬ ದೇಶವಿತ್ತು. ಆ ದೇಶದ ರಾಜ ಒಮ್ಮೆ ಒಂದು ಸ್ಪರ್ಧೆಯನ್ನು ಏರ್ಪಡಿಸಿದ್ದ. ಕವಿಗಳು, ಪಂಡಿತರು, ಪ್ರಸಿದ್ಧ ವಾಗ್ಮಿಗಳು ಆ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. 'ಪ್ರತಿಯೊಬ್ಬ ಪ್ರಜೆಯೂ ಸುಖವಾಗಿ ಬದುಕಲು ಅಗತ್ಯವಾಗಿ ಏನೇನು ಬೇಕು?' ಎಂಬುದೇ ಆ ಸ್ಪರ್ಧೆಯ ಪ್ರಮುಖ ವಿಷಯವಾಗಿತ್ತು.

ಅರಮನೆಯ ಸಭಾ ಭವನದಲ್ಲಿ ಮಹಾರಾಜರ ಸನ್ನಿಧಿಯಲ್ಲೇ ಕಾರ್ಯಕ್ರಮಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಅಂಕಿ–ಅಂಶ ಮಾಹಿತಿಗಳೊಂದಿಗೆ ಜಾಣ ಮಂತ್ರಿಗಳು ಕೂಡ ರಾಜರೆದುರು ಹಾಜರಿದ್ದರು. ಸ್ಪರ್ಧೆ ಆರಂಭವಾಯಿತು. ಪಂಡಿತರು, ಕವಿಗಳು ತಮ್ಮ ಹೆಸರು ಕೂಗಿದಂತೆಲ್ಲಾ ವೇದಿಕೆಗೆ ಬರುತ್ತಿದ್ದರು.

'ಮಳೆ ಬೆಳೆ ಚೆನ್ನಾಗಿ ಆಗಬೇಕು; ಪ್ರಜೆಗಳ ಆರೋಗ್ಯ ರಕ್ಷಣೆ ತುಂಬಾ ಅಗತ್ಯ; ಪ್ರಜಾ ಬಳಗಕ್ಕೆ ವಿದ್ಯೆ ವ್ಯಾಸಂಗ ಕೊಡಿಸಬೇಕು; ನಮ್ಮಲ್ಲಿ ವ್ಯವಸಾಯಾಭಿವೃದ್ಧಿ ಬಹುಬಗೆಯಲ್ಲಿ ಆಗಬೇಕು; ಬದುಕಿನ ನಿರ್ವಹಣೆಗೆ ನಿಷ್ಠೆ ಅಗತ್ಯ; ಎಲ್ಲರೂ ಸತ್ಯಶೀಲರಾಗಿಯೇ ಬಾಳಬೇಕು; ಎಲ್ಲರಲ್ಲೂ ಪರಸ್ಪರ ಸಹಕಾರ ಅಗತ್ಯ; ನಾವು ನಮ್ಮ ಪ್ರಾಕೃತಿಕ ಸಂಪತ್ತನ್ನು ಸಕ್ರಮ ಬಳಕೆ ಮಾಡಿಕೊಳ್ಳಬೇಕು' ಇತ್ಯಾದಿ ಭಿನ್ನ ಭಿನ್ನ ಉತ್ತರಗಳು ಬಂದವು. ಮಂತ್ರಿಗಳು ಬಯಸಿದಂತೆ ಆಶಾದಾಯಕ ಉತ್ತರಗಳು ಕಾಣಲಿಲ್ಲ.

ಕೊನೆಯದಾಗಿ ಒಬ್ಬ ಗ್ರಾಮೀಣ ಪಂಡಿತನ ಸರದಿ. ಆತನು 'ದಯಮಾಡಿ ಎಲ್ಲರೂ ಕೊಂಚ ಸಮಾಧಾನದಿಂದ ಕೇಳಿ. ಮಾನವನಿಗೆ ಕಣ್ಣು, ಕಿವಿ, ಮೂಗು, ನಾಲಿಗೆ ಮತ್ತು ಚರ್ಮಗಳೆಂಬ ಐದು ಪಂಚೇಂದ್ರಿಯಗಳಿವೆ. ಎಷ್ಟೋ ಬಗೆಯ ನೋವು–ನಲಿವುಗಳು ಜೀವನದಲ್ಲಿ ಇದ್ದೇ ಇರುತ್ತವೆ. ಆದರೂ ಈ ಐದು ಇಂದ್ರಿಯಗಳೇ ನಮ್ಮ ನಿತ್ಯ ಬದುಕಿನ ಮೂಗುದಾರಗಳು. ಇವನ್ನು ನಾವು ಗೆದ್ದರೆ ಮಾತ್ರ ಸುಖವಾಗಿ ಬದುಕಲು ಸಾಧ್ಯ. ಕಣ್ಣು ಸೊಬಗಿನ ರೂಪಕ್ಕೆ (ನೋಟಕ್ಕೆ) ಮೋಸ ಹೋಗಬಾರದು. ಕಿವಿಯು ಸವಿದನಿಗೆ ಕುಣಿಯಬಾರದು. ಮೂಗು ಗಂಧದಂತಹ ಪರಿಮಳಕ್ಕೆ ಮಾರು ಹೋಗಬಾರದು. ನಾಲಿಗೆ ರಸರುಚಿಗೆ ಸಿಲುಕಬಾರದು. ಚರ್ಮ ಹಿತಕರ ಸ್ಪರ್ಶಕ್ಕೆ ಬಲಿಯಾಗಬಾರದು. ಇವು ಐದನ್ನೂ ಮಾನವನು ಸದಾ ತನ್ನ ಹತೋಟಿಯಲ್ಲಿ ಟ್ಟುಕೊಂಡೇ ಬಾಳಬೇಕು. ಆಗ ನಮಗೆ ಸುಖವಾಗಿ ಬದುಕಲು ಉಳಿದೆಲ್ಲವೂ ದೊರಕುತ್ತವೆ. ಈ ಪಂಚೇಂದ್ರಿಯಗಳ ನಿಗ್ರಹಶಕ್ತಿಯೇ ನಮ್ಮೆಲ್ಲರ ದಿವ್ಯೌಷಧಿ. ಈ ಶಕ್ತಿ ಬೆಳೆದಂತೆಲ್ಲಾ ನಮ್ಮ ಬದುಕು ಬಂಗಾರವೇ ಹೌದು. ಆಗ ನಮ್ಮ ಮನೆಗಳು, ಗ್ರಾಮಗಳು ಹಾಗೂ ಈ ನಮ್ಮ ದೇಶ ಕೂಡ ಸುಭಿಕ್ಷವೇ ಆಗುತ್ತದೆ' ಎಂದು ಸರಳವಾಗಿ ಹೇಳಿದನು.

ಗ್ರಾಮೀಣ ಪಂಡಿತನ ಮಾತಿನಲ್ಲಿ ಚತುರತೆಯಿತ್ತು. ನೀತಿ ಮತ್ತು ನಿಜ ಸಂಗತಿಗಳು ನೆಲೆಗೂಡಿದ್ದವು. ಎಲ್ಲರಿಗೂ ಪರಿಚಯವಿರುವಂತಹ ಒಂದು ಸಾಮಾನ್ಯ ತಿಳಿವಳಿಕೆ ಇದಾಗಿತ್ತು. ಮಂತ್ರಿ– ಮಾನ್ಯರು ಮಾತ್ರವೇ ಅಲ್ಲ ಮಹಾರಾಜ ಕೂಡ ಪಂಡಿತನ ಸರಳ ಉತ್ತರಕ್ಕೆ ಮಾರು ಹೋಗಿದ್ದ. ಪಂಡಿತನನ್ನು ಪುರಸ್ಕರಿಸಿ ತನ್ನ ಆಸ್ಥಾನ ವಿದ್ವಾನನನ್ನಾಗಿ ಮಾಡಿಕೊಂಡ.

**–ದೊಡ್ಡಬಾಣಗೆರೆ ಪ್ರಕಾಶಮೂರ್ತಿ, ಚಿತ್ರದುರ್ಗ**




ಬಜ್ಜಿ ಅಂಗಡಿ ರಂಗಣ್ಣ
ನನಗೊಂದು ಬಜ್ಜಿ ಸುಡು ಅಣ್ಣ
ಬಿಸಿ ಬಿಸಿ ಬಜ್ಜಿ
ಜೊತೆಯಲಿ ಚಟ್ನಿ
ತಿನ್ನಲು ನನಗೆ ನೀಡಣ್ಣ

ಹೊರಗಡೆ ಬಂದಿಹ ಚಳಿಯಣ್ಣ
ಗಡಗಡ ನಡುಕವು ನನಗಣ್ಣ
ನಿನ್ನಯ ಬಜ್ಜಿ ಬಾಯಲಿ ಇಡಲು
ಬೊಂಬಾಟ್ ರುಚಿಯು ನೋಡಣ್ಣ

ಬಜ್ಜಿಯ ತಂದನು ರಂಗಣ್ಣ
ಬಾಯಲಿ ನೀರು ಬಂತಣ್ಣ
ಮಿಕಿ ಮಿಕಿ ನೋಡುತ
ತಲೆ ಅಲ್ಲಾಡಿಸಿ ಖುಷಿಯೊಳು
ಬಾಯೊಳಗಿಟ್ಟನು ಕಿಟ್ಟಣ್ಣ

ಆಹ್! ಆಹ್! ಕಟ್ಟಾ ಕಟ್ಟಾ..
ಚುರ್ ಚುರ್
ಎಂದಿತು ನಾಲಗೆಯು
ಕಣ್ಣಲಿ ನೀರು
ಮೂಗಲಿ ಹನಿಯು
ಸಾಕಪ್ಪಾ ಸಾಕು ಎಂದನು ಕಿಟ್ಟಣ್ಣ

ಕಿಟ್ಟನ ಸಂಕಟ ನೋಡಿ
ಮನಸಲೆ ನಕ್ಕು
ಸಕ್ಕರೆ ಕೊಟ್ಟನು ರಂಗಣ್ಣ
ಆಹಾ ಆಹಾ.. ಎಂದನು ಕಿಟ್ಟಣ್ಣ

**– ಕಲ್ಪನಾ ಹೆಗಡೆ,**
**ಸೋಮನಳ್ಳಿ**